ಮೈಸೂರ ಗೆಜೆಟ್ಟು.

ನಂ. 23 | ಸರ್ಕಾರದಿಂದ ಘಾಯಿಷ್ ಆದ್ದು. | ಸನ 1889.

ಬೆಂಗಳೂರು, ಶನಿವಾರ, ಜೂನ್ ತಾ|| 8, ಸನ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬ್ಬರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿವೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷಣಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 21ನೇ ಮೇ 1889.

ನಂ. 48.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟನೆಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನ ಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ನ ತಾರೀಖಿನಲ್ಲೂ ಬಹಿರಂಗವಾದ ಹರಾಜಿ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್‌ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ವ್ಯತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಜೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಬೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಪಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯಗೊಳ್ಳಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಪರಾಟೆ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ, ಇರುವ ಗೆಲ್ಲತಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟವಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಬ್ಜೆರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಜಿಲ್ಲೆಯ ತಾಲ್ಲೂಕಿನ ಹೆಸರು.	ಹೋಬ್ಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಯಾ ಜೇರಿಜ.	ಸಾಲಿಧಾನಾ ಸರಕಾರಕ್ಕೆ ಕೊಡಬೇಕಾದ ಪೈಪೋಟಿ ರೆಂಟ್.	ಯಾವ ಬುಕಿಗೋ ಸ್ವರೂಪಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೊಲಾರ.	ಬಂಗಾರಪೇಟೆ.	ಡಾಸರಹೊಸಹಳ್ಳಿ.	ಮಾಡಮು ಕ್ಕನಹಳ್ಳಿ.	ಮೆ॥ ಎಫ್. ಜಬ್ಬಿಯು ಸ್ಮಿತ್ (ಖರೀದಿಗೆ ಪಡೆದವರು)	72 0 5¾	458 9 1	258 0 1	1748 2 4 ಮತ್ತು ಬಡ್ಡಿ	ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರು ರೂಬರೂ ಮುಂದಿನ ತಿಂಗಳು 26ನೇತಾರೀಖಿನಲ್ಲಿ

ಷರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 10ನೇ ಮೇ 1889.

ನಂ. 51.—1870ನೇ ಇಸವಿ ಮೇ 28ನೇ ಮುಕ್ತಂ 76ನೇ ನಂಬರ್‌ವುಳ್ಳ ಚೀಫ್ ಕಮ್ಮಿಷ್ನರವರ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ ಮೈಸೂರು ಬಾರ್ ಲೀಬಾ ಕಾಲಾಳು ಫೂಜಿನ ಆಯಾ ದರ್ಜೆಗಳಿಗಾಗಿ ಇದರಡಿ ಕಂಡ ತಿದ್ದುಪಡಿ ಮಾಡಲ್ಪಟ್ಟ ವೇರ್ಷ್ ದರಗಳು ಮಂಜೂರ್ಮಾಡಲ್ಪಟ್ಟಿರುತ್ತೆ.

		ಮಾಹೆಯಾನಾ ವೇರ್ಷ ಮೊಬಲಗು. ರೂ. ಆ. ಪೈ.	
ಕುರ್ಮರ್ದಾರು		60 0 0	30 ದಿವಸ ಸರಮೀಸ್ ತಾರೀಫಿನ ಮೇಲೆ ಕಾಲ್ ಸರಟಿಫಿಕೇಟ್ ಮೇಲೆ.
ರಿಸಾಲ್ದಾರರು		40 0 0	
ಅಡಿಜುಟೆಂಟ್		12 8 0	
ಸುಬೇದಾರರು	ಫಸ್ಟ್‌ಕ್ಲಾಸ್	15 0 0	
	ಯರಡನೇ ಕ್ಲಾಸ್	12 8 0	
ಜಮೇದಾರರು	1ನೇ ಕ್ಲಾಸ್	8 0 0	
	2ನೇ ಕ್ಲಾಸ್	7 0 0	
ಸವಾಲ್ದಾರ್ ಮೇಜರ್		6 8 0	
ಹವಾಲ್ದಾರರು	1ನೇ ಕ್ಲಾಸ್	5 8 0	
	2ನೇ ಕ್ಲಾಸ್	5 0 0	
ಪ್ರೈವೇಟ್ಸ್ ಯಾನೇ ಸಿಪಾಯಿಗಳು		3 8 0	
ಡ್ರಮ್ಮರ್ ವ ಫೈಫರ್‌ಗಳು		4 0 0	

ತಾರೀಖು 19ನೇ ಮೇ 1889.

ನಂ. 50.—ತುಮಕೂರು ಡಿಸ್ಟ್ರಿಕ್ಟ್ ಜೂನಿಯರ್ ಡಿಪ್ಯೂಟಿ ಕಮ್ಮಿಷ್ಣರಾದ ಮು॥ ಸಿ. ಕೈಸ್. ಯವರು 1889ನೇ ಇಸವಿ ಜೂ೯ 6ನೇ ಮಕ್ಕುಂ ಲಾಗಾಯತು ಯಾ ಅವರು ರಜಾ ರಫ್ತಾದ ತಾರೀಖಿ ನೊಪಲು ಮೂರು ದಿವಸಗಳ ಕ್ಯಾಜ್ಯುಯಲ್ ರಜಾ ಕೊಡ ಲ್ಪಟ್ಟಿರುತ್ತಾರೆ.

ತಾರೀಖು 27ನೇ ಮೇ 1889.

ನಂ. 49.—ಮೈಸೂರು ತಾಲ್ಲೂಕು ಅಮಲ್ದಾರ್ ಯಂ. ಜಂಗಯ್ಯಕಟ್ಟರಿಗೆ 1889ನೇ ಇಸವಿ ಮಾರ್ಚಿ 12ನೇ ಮಕ್ಕುಂ 229ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಹತ್ತು ದಿವಸಗಳ ಪ್ರಿವಿಲೀಜ್ ರಜಾ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಮೇ 1889.

ನಂ. 52.—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟ್ ಮಂಡ್ಯ ತಾಲ್ಲೂಕಿನ ಗ್ರಾಮಗಳು ಎಂದು ಮೂಗಣಿಯಿಂದ ಮತ್ತೊಂದು ಮೂ ಗಣಿಗೆ ವರ್ಗಮಾಡಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ:—

ನಂ.	ಗ್ರಾಮ.	ಯಾವ ಮೂಗಣಿಯಿಂದ.	ಯಾವ ಮೂಗಣಿಗೆ.
1	ಹುಲಗನಹಳ್ಳಿ	ಮದ್ದೂರಿಂದ	ಆಲಗೂರಿಗೆ
2	ಅಗರಲಿಂಗನಹಳ್ಳಿ	ತಿಪ್ಪೂರಿಂದ	ಮದ್ದೂರಿಗೆ

ನಂ. 53.—ಇದರಡಿ ಕಂಡ, ಮೈಸೂರು ಡಿಸ್ಟ್ರಿಕ್ಟ್ ಮಂಡ್ಯ ತಾಲ್ಲೂಕಿನ ಗ್ರಾಮಗಳ ಕೇರುವಿಕೆಯು ಹುಕುಂ ಮಾಡಲ್ಪಟ್ಟಿರುತ್ತೆ:—

ಮೂಗಣಿ.	ನಂಬರ್.	ಕೆಳಕಿಕೊಳಲ್ಪಡಬೇಕಾದ ಗ್ರಾಮಗಳು.	ನಂ.	ಮೂರನೇ ಕಲಮಿನಲ್ಲಿ ಕಂಡ ಗ್ರಾಮಗಳೊಂದಿಗೆ ಕೇರಿಸಲ್ಪಡಬೇಕಾದ ಗ್ರಾಮಗಳು.
1	2	3	4	5
ದುದ್ದ	1	ಗಂಟಿಗವಾಡನಹಳ್ಳಿ	.. 1	ಚಿಕ್ಕಗವಡನಹಳ್ಳಿ
ಮತ್ತಿಕೆರೆ	2	ಜಾವನಹಳ್ಳಿ	.. 1	ಮರಿಗವಡನಕೊಪ್ಪಲು
ಬಸರಾಳ	3	ತಿರುಮಲಾಪುರ	.. 1	ಕುರುಬರಹಳ್ಳಿ
	4	ಗುತ್ತಿಗನಹಳ್ಳಿ	.. 1	ಸುಂಡಳಗೆರೆ
ಮದ್ದೂರು	5	ಗೊರವನಹಳ್ಳಿ	.. 1	ತಿಪ್ಪಸಂದ್ರ
	6	ಚಾಮನಹಳ್ಳಿ	.. 1	ಉಪ್ಪಾರದೊಡ್ಡಿ
ತಿಪ್ಪೂರು	7	ದಡಿಗ	.. 1	ಹೊಸೂರು
	8	ಹೊನ್ನಲಗೆರೆ	.. 1	ಚಂಡಹಳ್ಳಿ

ತಾರೀಖು 18ನೇ ಮೇ 1889.

ನಂ. 39.—1887ನೇ ಇಸವಿ ಡಿಸಂಬರ್ 17ನೇ ಮಕ್ಕುಂವಳ್ಳಿ ಮೈಸೂರು ಗವರ್ಣಮೆಂಟ್ ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟ 1887ನೇ ಇಸವಿ ಡಿಸಂಬರ್ 14ನೇ ಮಕ್ಕುಂ 155ನೇ ನಂಬರ್ ವಳ್ಳ ಇಸ್ತಿಹಾರ್‌ನಾಮೆಯಲ್ಲಿ "ಮನ್ನಾ ಜಾತಿ ಮರಗಳು" ಕುರಿತ 11ನೇ ರೂಲನ್ನು ಬದಲಾಯಿಸಿ ಯಿದರಿಂದ ಹುಕ್ಕುಂ ಮಾಡುವದೇನಂದರೆ, ಕಾಫಿ ಎಸ್ಟೇಟುಗಳು ಇರತಕ್ಕ ತಾಲ್ಲೂಕಿನ ಆಮಲ್ದಾರರು ಸದರೀ ಇಸ್ತಿಹಾರ್‌ನಾಮೆಯ ಷರತ್ತುಗಳನುಸರಿಸಿ ಮಾಫಿ ರಹದಾರಿ ಪಡೆದಿರುವವರ ವಾಸ್ತವ್ಯವಾಗಿ ಸ್ವಂತ ಉಪಯೋಗದ ಬಗ್ಗೆ ಮ ನ್ನಾಜಾತಿ ಮರಗಳನ್ನು ಲಂಘಾ ಕಾಫಿ ಎಸ್ಟೇಟಿನ ಆವಶ್ಯಕೆಗೆ ಸಾಗಿಸುವ ಬಗ್ಯಾಗಿ ಮಾಫಿ ರಹದಾರಿಗಳನ್ನು ಕೊಡಬಹುದು.

ಬಿಡೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

1889ನೇ ಇಸವಿ ಮೇ ತಾರೀಖು 9.

ಮೈಸೂರು ದೇೀ ಪರೀಕ್ಷೆ.

ಸ೯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇೀ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ, ಚಿಂತಾಮಣಿ ತಾಲ್ಲೂಕು ಗವರ್ಣಮೆಂಟು ಕನ್ನಡ ಸ್ಕೂಲ್‌ನಿಂದ, ತೇರ್ಗಡೆಯಾಗುವವರ ಪೈಕಿ ಆಯಾ ಭಾಗಗಳಲ್ಲಿ ಅಧಿಕವಾದ ನಂಬರುಗಳನ್ನ ಪಡೆಯುವ ವಿದ್ಯಾರ್ಥಿಗಳಿಗೆ ಈ ಕೆಳಗೆ ಕಂಡಂತೆ, ಬಹುಮಾನಗಳು, ಸದರೀ ಸ್ಕೂಲ್ ಹೆಡ್ ಮಾಸ್ಟರಾದ ಅಳಸಿಂಗ್ರಾಚಾರ್ಯರಿಂದ, ಕೊಡಲ್ಪಡುವವು.

I. ಭಾಷೆಯಲ್ಲಿ ಅಧಿಕವಾದ ನಂಬರು ಪಡೆಯುವವರಿಗೆ ಕಲಾಬತ್ತು ಅಂಚುಳ್ಳ ಬಿೀ ಹೊಸ ರುವಾಲು ಬೆಲೆ ರೂಪಾಯಿಗಳು 6.

II. ಗಣಿತದಲ್ಲಿ ಅಧಿಕವಾದ ನಂಬರು ಪಡೆಯುವವರಿಗೆ ರೂಪಾಯಿಗಳು 4.

III. ಭೂಗೋಳ ಮತ್ತು ಚರಿತ್ರೆಗಳಲ್ಲಿ ಅಧಿಕವಾದ ನಂಬರು ಪಡೆಯುವವರಿಗೆ ರೂಪಾಯಿಗಳು 3.

IV. ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಲ್ಲಿ ಅಧಿಕವಾದ ನಂಬರು ಪಡೆಯುವವರಿಗೆ ಬೆಳ್ಳಿಬಟ್ಲು ಬೆಲೆ ರೂಪಾಯಿ 3.

ಎಲ್. ರೈಸ್,
ಎಡ್ಯುಕೇಷನ್ ಸೆಕ್ರಟೆರಿ.